

'ಕಾನೂರು ಹೆಗ್ಗಡಿತಿ' ಚಿತ್ರದ ನಾಯಕಿ ತಾರಾ ಅವರೊಂದಿಗೆ ಕಾರ್ನಾಡರು

'ನಿಂಗ್ಯಾರು ಇದನ್ನು ರೆಡಿ ಮಾಡೋಕೆ ಹೇಳಿದ್ದು?' ಎಂದು ಗದರಿ ಗಲಾಟೆ ಮಾಡಿದ. ಗಿರೀಶ ನನ್ನನ್ನು ಪಕ್ಕಕ್ಕೆ ಕರೆದು, 'ಇನ್ನೊಂದ್ಸಲ ನಾನು ಹೇಳಿದರೂ ನೀನು ಕೆಲಸ ಮಾಡಬೇಡ. ಚೈತನ್ಯನನ್ನೇ ಕೇಳು' ಎಂದು ಹೇಳಿದರು.

ಸಂಭಾವನೆಯ ದೃಷ್ಟಿಯಿಂದಲೂ ಅಷ್ಟೆ. 'ಗಿರೀಶ ಅವರು ಕೊಡುವಷ್ಟು ಯಾರೂ ಸಂಭಾವನೆ ಕೊಡುವುದಿಲ್ಲ' ಎಂದು ಎಲ್ಲರೂ ಹೇಳುತ್ತಿದ್ದರು. ಅವರಿಗೆ ಸಿಕ್ಕ ಬಜೆಟ್‌ನಲ್ಲಿ ಬಹುಪಾಲನ್ನು ಅವರು ಎಲ್ಲರಿಗೂ ಹಂಚಿಬಿಡುತ್ತಿದ್ದರು. ಹೊಸತಾಗಿ ಬಂದವರಿಗೆ ಕಡಿಮೆ ಕೊಡುವುದು, ಅನುಭವಿಗಳಿಗೆ ಹೆಚ್ಚು ಎಂದೆಲ್ಲ ಇರುತ್ತಿರಲಿಲ್ಲ. ಅಷ್ಟು ದೊಡ್ಡ ಮನುಷ್ಯರಾದರೂ ಚಿತ್ರತಂಡದಲ್ಲಿ ಯಾರೂ ಅವರಿಗೆ ಹೆದರಿಕೊಂಡು ಇರುತ್ತಿರಲಿಲ್ಲ. ನಟರು ಅವರ ಎದುರಿಗೇನೇ ಅವರು ನಡೆಯುವ ರೀತಿ, ಓಡಾಡುವ ರೀತಿ ಎಲ್ಲವನ್ನೂ ಅನುಕರಣೆ ಮಾಡುತ್ತಿದ್ದರು. ಅವರು ಅದನ್ನು ನೋಡಿ ಸಂತೋಷ ಪಡುತ್ತಿದ್ದರು. ಆ ದಿನಗಳು ನನ್ನ ಮನಸಲ್ಲಿ ಹಸಿರಾಗಿ ಉಳಿದಿವೆ.

ಅವರ 'ಯಯಾತಿ' ನಾಟಕಕ್ಕೆ ಮೊದಲ ಸಲ ಸತ್ಯು ಡಿಸೈನ್ ಮಾಡಿದ್ದರು. ಎರಡನೇ ಸಲ ನಾನೇ ಡಿಸೈನ್ ಮಾಡಿದ್ದೆ. ಅದನ್ನು ನೋಡಿ ಕಾರ್ನಾಡರು 'ನೀನು ಮಾಡಿರುವ ಕಾಸ್ಟ್ಯೂಮ್ ಇಟ್ಟುಕೊಂಡು ನನ್ನ ಪುಸ್ತಕದ ಕವರ್‌ಪೇಜ್‌ಗೆ ಫೋಟೊ ಶೂಟ್ ಮಾಡಿಸಬೇಕು' ಎಂದು ಹೇಳಿದ್ದರು. ಆಗಲೇ ಅವರು ಆಕ್ಸಿಜನ್ ನಳಿಕೆ ಹಾಕಿಕೊಂಡಿದ್ದರು. ಆ ಫೋಟೋಶೂಟ್‌ನಲ್ಲಿ ಇಡೀ ದಿನ ನಾವು ಒಟ್ಟಿಗೆ ಇದ್ದೆವು. ನಾನು ಮಾಡಿರುವ ಕೆಲಸವನ್ನು ತುಂಬ ಚೆನ್ನಾಗಿದೆ ಎಂದು ಮೆಚ್ಚಿಕೊಂಡರು. ಅದನ್ನೇ ಅವರ 'ಯಯಾತಿ'ಯ ಹೊಸ ಆವೃತ್ತಿಯಲ್ಲಿ ಬಳಸಿಕೊಂಡರು.

ಅವರ ಹೆಂಡತಿ ಸರಸ್ವತಿ 'ಬೆಳಕು' ಎಂಬ ಒಂದು ಟ್ರಸ್ಟ್ ಮಾಡಿದ್ದಾರೆ. ಅದರ ಅಡಿಯಲ್ಲಿ ಕನಕಪುರದ ಸಮೀಪ 13 ಹಳ್ಳಿಗಳನ್ನು ದತ್ತು ತೆಗೆದುಕೊಂಡಿದ್ದಾರೆ. ಆ ಟ್ರಸ್ಟ್‌ಗೆ ನಾನು ಮತ್ತು ಗಿರೀಶ ಇಬ್ಬರೂ ಟ್ರಸ್ಟಿಗಳು. ಜಾಸ್ತಿ ಕೆಲಸ ಸರಸ್ವತಿ ಅವರೇ ಮಾಡುತ್ತಿದ್ದರು. ಆ ಟ್ರಸ್ಟ್‌ನ ರಿಜಿಸ್ಟ್ರೇಶನ್ ಮಾಡಿಸಲಿಕ್ಕೆ ನಾವು ಮೂರೂ ಜನ ಕೆಂಗೇರಿ ಬಳಿಗೆ ಹೋಗಿದ್ದೆವು. ಅಲ್ಲಿ ಯಾರೂ ಗಿರೀಶ ಅವರನ್ನು ಗುರ್ತಿಸಲೇ ಇಲ್ಲ. 'ಆಚೆ ಕೂತು ಕಾಯಿರಿ' ಎಂದುಬಿಟ್ಟರು. ನಮಗೂ ಆಶ್ಚರ್ಯ ಆಯ್ತು, ಇಲ್ಲಿ